2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **88/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಡಾ. ಸಂತೋಷ ಅರಸ್ ಕೆ.ಎಸ್. | ಪಿಡಬ್ಲೂ - 09 |
| ತಂದೆಯ ಹೆಸರು | - ಲೇ ಕೆ.ಟ್ ಸೋಮಶೇಖರ ರಾಜ ಅರಸ್ | ಸಿಡಬ್ಲೂ - 16 |
| ವಯಸ್ಸು | - 37 ವರ್ಷ | |
| ಉದ್ಯೋಗ | - ವೈದ್ಯರು ಜಿಲ್ಲಾಸ್ಪತ್ರೆ, ಚಿಕ್ಕಮಗಳೂರು | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 19.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು ಸೆಪ್ಟೆಂಬರ್ 2017 ರಿಂದ ಫೆಬ್ರುವರಿ 2023 ರವರೆಗೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 26.03.2022 ರಂದು ಮದ್ಯಾಹ್ನ 1.45 ಗಂಟೆಗೆ ಗಾನವಿ ಎಂಬ 28 ವರ್ಷದ ಮಹಿಳೆ ಹಲ್ಲುಜ್ಜಲು ಇಲಿ ಪಾಷಾಣದ ಪೇಸ್ಟನ್ನು ಮದ್ಯಾಹ್ನ 12.30 ಕ್ಕೆ ಉಪಯೋಗಿಸಿರುವ ವರದಿಯೊಂದಿಗೆ ಚಿಕಿತ್ಸೆಗಾಗಿ ಹಾಜರಾಗಿದ್ದರು. ನಾನು ಸದರಿ ಮಹಿಳೆಯನ್ನು ಪರೀಕ್ಷಿಸಿ ಪ್ರಥಮ ಚಿಕಿತ್ಸೆಯನ್ನು ನೀಡಿ, ಅವಳ ಹೊಟ್ಟೆಯನ್ನು ಸ್ಟಮಕ್ ವಾಶ್ ಗೆ ಒಳಪಡಿಸಿ ಹೊಟ್ಟೆಯ ದ್ರಾವಣವನ್ನು ಕಾಯ್ದಿರಿಸಿ ಪೋಲೀಸರಿಗೆ ಈ ಬಗ್ಗೆ ಮಾಹಿತಿ ನೀಡಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಸದರಿ ಮಹಿಳೆಗೆ ದೊಡ್ಡ ಆಸ್ಪತ್ರೆಗೆ ದಾಖಲಾಗುವಂತೆ ಸೂಚಿಸಿರುತ್ತೇನೆ.

3. ನಂತರ ಮೂಡಿಗೆರೆ ಪೋಲೀಸರು ಮನವಿಯನ್ನು ಸಲ್ಲಿಸಿ ಗಾನವಿ

ಈಕೆ ಪರವಾಗಿ ಯಾವುದೇ ದೂರು ದಾಖಲಾಗದ ಕಾರಣ ನಾನು ಸಂಗ್ರಹಿಸಿದ ಹೊಟ್ಟೆ ತೊಳೆದ ದ್ರಾವಣವನ್ನು ಶೇಖರಿಸಿಡಲು ಕೋರಿದ್ದರು. ಸದರಿ ಮನವಿಯನ್ನು ನಿಪಿ.33 ಎಂದು ಸಾಕ್ಷಿಯ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

4. ದಿಃ 14.04.2022 ರಂದು ಮೂಡಿಗೆರೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಕಾರಣ ನಾನು ಶೇಖರಿಸಿಟ್ಟಿದ್ದ ಹೊಟ್ಟೆ ತೊಳೆದ ದ್ರಾವಣವನ್ನು ಮೂಡಿಗೆರೆ ಪೋಲೀಸರಿಗೆ ಮನವಿ ಮೇರೆಗೆ ಹಸ್ತಾಂತರಿಸಿದ್ದೇನೆ. ಸದರಿ ಮನವಿಯನ್ನು ನಿಪಿ.34 ಎಂದು ಸಾಕ್ಷಿಯ ಸಹಿಯನ್ನು ನಿಪಿ.34(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಪಿ.ಇ.ಎಸ್., ವಕೀಲರಿಂದ – ಆರೋಪಿತರ ಪರವಾಗಿ</u>

5. ಚಿಕಿತ್ಸೆಗಾಗಿ ಬಂದ ಮಹಿಳೆ ನಮಗೆ ನೀಡಿದ ಮಾಹಿತಿಯನ್ನು ದಾಖಲಿಸಿ ಪೋಲೀಸರಿಗೆ ಈ ಬಗ್ಗೆ ಮಾಹಿತಿ ರವಾಸಿದ್ದೇನೆ. ಚಿಕಿತ್ಸೆಗಾಗಿ ಬಂದ ಮಹಿಳೆ ಆಕಸ್ಮಿಕವಾಗಿ ಇಲಿ ಪಾಷಾಣದ ಪೇಸ್ಟಿನಿಂದ ಹಲ್ಲುಜ್ಜಿರುವುದಾಗಿ ಮಾಹಿತಿ ನೀಡಿದ್ದಳು. ನಾನು ಈ ವಿಚಾರವನ್ನು ಪೋಲೀಸರಿಗೆ ತಿಳಿಸಿದ್ದೇನೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ